**All India Radio: Bangalore**
**National Bulletin In Kannada**
**23.08.2025  1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**23.08.2025  1.10 p.m.**

**<><><><>**

ಮುಖ್ಯಾಂಶಗಳು

1. ಮುಂದಿನ ೫ ವರ್ಷಗಳಲ್ಲಿ ೫ ಯೂನಿಕಾರ್ನ್ ಸ್ಥಾಪಿಸಿ ವಾರ್ಷಿಕ ೫೦ ರಾಕೆಟ್ ಉಡಾವಣೆಗೊಳಿಸುವಂತೆ ಖಾಸಗಿ ವಲಯಕ್ಕೆ ಪ್ರಧಾನಿ ಕರೆ
2. ಇದೇ ೨೯ ರಿಂದ ನಾಲ್ಕು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಜಪಾನ್, ಚೀನಾಗೆ ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ
3. ಭಾರತ ಅಮೆರಿಕಾ ನಡುವೆ ವ್ಯಾಪಾರ ಮಾತುಕತೆಗಳು ಪ್ರಗತಿಯಲ್ಲಿ - ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಸ್ಪಷ್ಟನೆ
4. ಬಿಹಾರ ಮತದಾರರ ಪಟ್ಟಿ ಪರಿಷ್ಕರಣೆ;  ರಾಜಕೀಯ ಪಕ್ಷಗಳಿಂದ ೯ ಆಕ್ಷೇಪಣೆ, ಮತದಾರರಿಂದ ೯೯ ಸಾವಿರ ಅರ್ಜಿ ಸಲ್ಲಿಕೆ

<><><><>

ದೇಶಾದ್ಯಂತ ಇಂದು ಎರಡನೇ ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು ಆಚರಿಸಲಾಗುತ್ತಿದೆ. ೨೦೨೩ರ ಆಗಸ್ಟ್ ೨೩ರಂದು ಚಂದ್ರಯಾನ-೩ ಮಿಷನ್‌ನ ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿ ಚಂದ್ರನ ಮೇಲೆ ಇಳಿದ ಮತ್ತು ಪ್ರಜ್ಞಾನ್ ರೋವರ್ ನಿಯೋಜಿಸಿದ ಸ್ಮರಣಾರ್ಥ ಈ ದಿನವನ್ನು ಆಚರಿಸಲಾಗುತ್ತಿದೆ. ಈ ಸಾಧನೆ ಭಾರತವನ್ನು ಚಂದ್ರನ ದಕ್ಷಿಣ ಧ್ರುವದ ಸಮೀಪ ಇಳಿದ ವಿಶ್ವದ ಮೊದಲ ರಾಷ್ಟ್ರವನ್ನಾಗಿಸಿದ್ದು, ಆ ಮೂಲಕ ಚಂದ್ರನ ಮೇಲ್ಮೈ ತಲುಪಿದ ನಾಲ್ಕನೇ ರಾಷ್ಟ್ರ ಎಂಬ ಹೆಗ್ಗಳಿಕೆಗೂ ಪಾತ್ರವಾಗಿಸಿದೆ. ಆರ್ಯಭಟದಿಂದ ಗಗನಯಾನದವರೆಗೆ: ಪೌರಾಣಿಕ ಜ್ಞಾನದಿಂದ ಅನಂತ ಸಾಧ್ಯತೆಗಳತ್ತ ಎಂಬುದು ಈ ವರ್ಷದ ಬಾಹ್ಯಾಕಾಶ ದಿನದ ಘೋಷವಾಕ್ಯವಾಗಿದೆ. ಪ್ರಧಾನಿ ನರೇಂದ್ರ ಮೋದಿ ಬಾಹ್ಯಾಕಾಶ ವಲಯದಲ್ಲಿ ತೊಡಗಿಸಿಕೊಂಡಿರುವ ಎಲ್ಲರಿಗೆ, ವಿಜ್ಞಾನಿಗಳಿಗೆ ಮತ್ತು ಸಮಸ್ತ ಯುವ ಸಮೂಹಕ್ಕೆ ಬಾಹ್ಯಕಾಶ ದಿನದ ಶುಭಾಶಯ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವ ವಿಡಿಯೋ ಸಂದೇಶದಲ್ಲಿ ಪ್ರಧಾನಿ, ಮುಂದಿನ ೫

ವರ್ಷಗಳಲ್ಲಿ ೫ ಯೂನಿಕಾನ್‌ಗಳನ್ನು ಸ್ಥಾಪಿಸಿ ವಾರ್ಷಿಕವಾಗಿ ೫೦ ರಾಕೆಟ್ ಉಡಾವಣೆ ಗೊಳಿಸುವಂತೆ ಖಾಸಗಿ ವಲಯಕ್ಕೆ ಕರೆ ನೀಡಿದ್ದಾರೆ. ಅಲ್ಪಕಾಲದಲ್ಲಿ ರಾಷ್ಟ್ರೀಯ ಬಾಹ್ಯಾಕಾಶ ದಿನ ಯುವಕರಲ್ಲಿ ಉತ್ಸಾಹ ಮತ್ತು ಆಕರ್ಷಣೀಯ ಕ್ಷಣವಾಗಿ ಬೆಳೆದಿದೆ. ಸೆಮಿ ಕ್ರಯೋಜನಿಕ್ ಇಂಜಿನ್ ಮತ್ತು ಎಲೆಕ್ಟ್ರಿಕ್ ಪ್ರಪಲ್ಷನ್ ನಂತಹ ಕ್ರಾಂತಿಕಾರಿ ತಂತ್ರಜ್ಞಾನದಲ್ಲಿ ವೇಗವಾಗಿ ಮುನ್ನಡೆಯುತ್ತಿದ್ದು ಶೀಘ್ರದಲ್ಲಿ ಗಗನಯಾನ್ ಯೋಜನೆಯನ್ನು ಆರಂಭಿಸುವುದಾಗಿ ತಿಳಿಸಿದ್ದಾರೆ.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ**

ಮುಂಬರುವ ದಿನಗಳಲ್ಲಿ ಭಾರತ ಸ್ವಂತ ಬಾಹ್ಯಾಕಾಶ ನಿಲ್ದಾಣವನ್ನು ನಿರ್ಮಿಸಲಿದೆ. ಕಳೆದ ೧೧ ವರ್ಷಗಳಲ್ಲಿ ಬಾಹ್ಯಾಕಾಶ ವಲಯದಲ್ಲಿ ಸರ್ಕಾರ ಹಲವು ಸುಧಾರಣೆಗಳನ್ನು ಕೈಗೊಂಡಿದೆ ಹಾಗೂ ಈ ಕ್ಷೇತ್ರ ನಿರಂತರವಾಗಿ ಸಾಧನೆಗಳನ್ನು ದಾಖಲಿಸುತ್ತಿದೆ ಎಂದು ತಿಳಿಸಿದ್ದಾರೆ.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ ( ೨೫ ಸೆಕೆಂಡುಗಳು)**

ಬಾಹ್ಯಾಕಾಶ ತಂತ್ರಜ್ಞಾನ ಇಂದು ಭಾರತದ ಆಡಳಿತದ ಭಾಗವಾಗುತ್ತಿದ್ದು ಉಪಗ್ರಹಗಳ ವಿಶ್ಲೇಷಣೆಯ ಆಧಾರದ ಮೇಲೆ ಬೆಳೆ ವಿಮಾ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಉಪಗ್ರಹಗಳ ಮೂಲಕ ಮೀನುಗಾರರಿಗೆ ಸುರಕ್ಷತಾ ಮಾಹಿತಿ ಲಭ್ಯವಾಗುತ್ತಿದೆ. ಪ್ರಧಾನಮಂತ್ರಿ ಗತಿಶಕ್ತಿ ರಾಷ್ಟ್ರೀಯ ಕ್ರಿಯಾಯೋಜನೆಯಲ್ಲಿ ಭೌಗೋಳಿಕ ದತ್ತಾಂಶ ಬಳಕೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಕೇಂದ್ರ ಸಚಿವರಾದ ಅಮಿತ್ ಶಾ, ಕಿರಣ್ ರಿಜಿಜು ಸೇರಿದಂತೆ ಮತ್ತಿತತರ ಗಣ್ಯರು ದೇಶದ ಜನತೆಗೆ ರಾಷ್ಟ್ರೀಯ ಬಾಹ್ಯಾಕಾಶ ದಿನದ ಶುಭಾಶಯ ಕೋರಿದ್ದಾರೆ. ಈ ದಿನದ ಅಂಗವಾಗಿ ಬೆಂಗಳೂರಿನ ಜವಾಹರ್‌ಲಾಲ್ ನೆಹರೂ ತಾರಾಲಯದ ವತಿಯಿಂದ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಶಾಲಾ ಮಕ್ಕಳಿಗಾಗಿ, ಚಿತ್ರಸ್ಪರ್ಧೆ, ಆಶುಭಾಷಣ, ಆರ್ಯಭಟ ಮಾದರಿ ತಯಾರಿಕೆ, ರಸಪ್ರಶ್ನೆ ಮತ್ತು ಜಿಗ್ಸಾ ಪಜಲ್ ಚಟುವಟಿಕೆ ಆಯೋಜಿಸಲಾಗಿದೆ. ಚಂದ್ರನ ಕುರಿತ ಪ್ರದರ್ಶನ ಮತ್ತು ಸಾಕ್ಷ್ಯಚಿತ್ರ ಪ್ರದರ್ಶನ ಕೂಡ ಏರ್ಪಡಿಸಲಾಗಿದೆ.

<><><>

ಪ್ರಧಾನಿ ನರೇಂದ್ರ ಮೋದಿ ಇದೇ ೨೯ರಿಂದ ನಾಲ್ಕು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಜಪಾನ್ ಮತ್ತು ಚೀನಾಗೆ ಭೇಟಿ ನೀಡಲಿದ್ದಾರೆ. ಇದೇ ೨೯ ರಿಂದ ೩೦ರವರೆಗಿನ ಜಪಾನ್ ಪ್ರವಾಸದ ವೇಳೆ ಅವರು, ೧೫ನೇ ಭಾರತ-ಜಪಾನ್ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಜಪಾನ್‌ಗೆ

ಪ್ರಧಾನಮಂತ್ರಿ ಮೋದಿ ಅವರ ಲನೇ ಭೇಟಿ ಇದಾಗಿದೆ ಮತ್ತು ಜಪಾನ್‌ನ ಪ್ರಧಾನಮಂತ್ರಿ ಶಿಗೆರು ಇಷಿಬಾ ಅವರೊಂದಿಗೆ ಮೊದಲ ಶೃಂಗಸಭೆಯಾಗಲಿದೆ. ಈ ಭೇಟಿಯ ವೇಳೆ, ಉಭಯ ನಾಯಕರು ಭಾರತ ಮತ್ತು ಜಪಾನ್ ನಡುವಿನ ವಿಶೇಷ ಕಾರ್ಯತಂತ್ರ ಹಾಗೂ ಜಾಗತಿಕ ಪಾಲುದಾರಿಕೆಯನ್ನು ಪರಿಶೀಲಿಸಲಿದ್ದಾರೆ. ಇದರಲ್ಲಿ ರಕ್ಷಣೆ, ಭದ್ರತೆ, ವ್ಯಾಪಾರ ಮತ್ತು ಆರ್ಥಿಕತೆ, ತಂತ್ರಜ್ಞಾನ ಹಾಗೂ ನಾವಿನ್ಯತೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಗುವುದು. ಉಭಯ ನಾಯಕರು ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆಯೂ ಮಾತುಕತೆ ನಡೆಸಲಿದ್ದಾರೆ. ಪ್ರವಾಸದ ಎರಡನೇ ಚರಣದ ಭಾಗವಾಗಿ ಪ್ರಧಾನಿ, ಇದೇ ೩೧ರಿಂದ ಸೆಪ್ಟೆಂಬರ್ ೧ ರವರೆಗೆ ಚೀನಾಗೆ ಭೇಟಿ ನೀಡಲಿದ್ದು, ಟಿಯಾಂಜಿನ್ ನಗರದಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಘ - ಎಸ್‌ಸಿಒ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ, ಹಲವು ಜಾಗತಿಕ ನಾಯಕರೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸುವ ನಿರೀಕ್ಷೆಯಿದೆ. ಭಾರತ ೨೦೧೭ರಿಂದ ಎಸ್‌ಸಿಒ ಸದಸ್ಯ ರಾಷ್ಟ್ರವಾಗಿದ್ದು, ೨೦೨೨-೨೩ರ ಅವಧಿಯಲ್ಲಿ ಎಸ್‌ಸಿಒ ರಾಷ್ಟ್ರಾಧ್ಯಕ್ಷರ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿತ್ತು.

<><><>

ಭಾರತ-ಅಮೆರಿಕ ವ್ಯಾಪಾರ ಮಾತುಕತೆಗಳು ಇನ್ನೂ ನಡೆಯುತ್ತಿವೆ ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ಎಕನಾಮಿಕ್ ಟೈಮ್ಸ್ ವಿಶ್ವ ನಾಯಕರ ವೇದಿಕೆಯಲ್ಲಿ ಮಾತನಾಡಿದ ಅವರು, ದೇಶದ ರೈತರು ಮತ್ತು ಸಣ್ಣ ಉತ್ಪಾದಕರ ಹಿತಾಸಕ್ತಿಗಳನ್ನು ರಕ್ಷಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದ್ದಾರೆ.

<><><>

ಬಿಹಾರದಲ್ಲಿ ಕೈಗೊಳ್ಳಲಾದ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕುರಿತಂತೆ ಆಕ್ಷೇಪಣೆಗಳು ಮತ್ತು ದಾವೆಗಳನ್ನು ಸಲ್ಲಿಸಲು ಕೇವಲ ೯ ದಿನಗಳು ಬಾಕಿಯಿದ್ದು, ಈವರೆಗಿನ ಮತದಾರರಿಂದ ೯೯ ಸಾವಿರದ ೬೫೬ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ರಾಜಕೀಯ ಪಕ್ಷಗಳು ಕೇವಲ ೯ ಆಕ್ಷೇಪಣೆಗಳನ್ನು ಸಲ್ಲಿಸಿವೆ. ಚುನಾವಣಾ ನೋಂದಣಾ ಅಧಿಕಾರಿಗಳು ಮತದಾರರು ಸಲ್ಲಿಸಿರುವ ೭ ಸಾವಿರದ ೩೬೭ ಅರ್ಜಿಗಳನ್ನು ಈಗಾಗಲೇ ಇತ್ಯರ್ಥಗೊಳಿಸಿದ್ದಾರೆ. ಆಕ್ಷೇಪಣೆ ಸಲ್ಲಿಸಲು ಸೆಪ್ಟೆಂಬರ್ ೧ ರವರೆಗೆ ಕಾಲವಕಾಶ ಇದೆ. ಆಗಸ್ಟ್ ೧ ರಿಂದ ಈವರೆಗೆ ಸುಮಾರು ೨ ಲಕ್ಷದ ೮೩

ಸಾವಿರ ನೂತನ ಮತದಾರರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳ್ಳಲು ನೋಂದಾಯಿಸಿಕೊಂಡಿದ್ದಾರೆ.

<><><>

ಲಿಂಗ ಸಮಾನತೆ ಮತ್ತು ಜಾಗತಿಕ ಶಾಂತಿಗೆ ಭಾರತದ ಅಚಲ ಬದ್ಧತೆಯನ್ನು ಪ್ರತಿಬಿಂಬಿಸುವ ಪ್ರಮುಖ ಹೆಜ್ಜೆಯಾಗಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ವಿಶ್ವಸಂಸ್ಥೆಯ ಮಹಿಳಾ ಮಿಲಿಟರಿ ಅಧಿಕಾರಿಗಳ ಕೋರ್ಸ್ ಗಓಫಒಔಅ-೨೦೨೫ ರಲ್ಲಿ ಭಾರತ ಸೇರಿದಂತೆ ೧೫ ರಾಷ್ಟ್ರಗಳ ಮಹಿಳಾ ಮಿಲಿಟರಿ ಅಧಿಕಾರಿಗಳೊಂದಿಗೆ ಸಂವಾದ ನಡೆಸಿದರು. ಇದೇ ೧೮ ರಿಂದ ಆರಂಭವಾಗಿ ೨೯ ರವರೆಗೆ ನವದೆಹಲಿಯ ಮಾಣೆಕ್ ಶಾ ಕೇಂದ್ರದಲ್ಲಿ ನಡೆಯುತ್ತಿರುವ ಈ ಕೋರ್ಸ್, ರಕ್ಷಣಾ ಸಚಿವಾಲಯ ಮತ್ತು ವಿದೇಶಾಂಗ ಸಚಿವಾಲಯದ ಆಶ್ರಯದಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಕೇಂದ್ರದ ಸಹಯೋಗದಲ್ಲಿ ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಮಹಿಳಾ ಅಧಿಕಾರಿಗಳ ಉಪಸ್ಥಿತಿ ವಿಶ್ವಸಂಸ್ಥೆಯ ಏಕತೆ ಮತ್ತು ಸಹಕಾರ ಮನೋಭಾವದ ಸಂಕೇತವಾಗಿದೆ. ಅವರ ಸಮರ್ಪಣೆ ಶಾಂತಿ ಕಾಪಾಡುವುದು ಮಾತ್ರವಲ್ಲದೆ ಜಾಗತಿಕ ಭದ್ರತೆಯನ್ನು ಖಚಿತಪಡಿಸುತ್ತದೆ ಎಂದರು. ಹನ್ನೆರಡು ಭಾರತೀಯ ಮಹಿಳಾ ಅಧಿಕಾರಿಗಳು ಮತ್ತು ಐದು ಪ್ರಶಿಕ್ಷಣಾರ್ಥಿಗಳು ತಮ್ಮ ಜಾಗತಿಕ ಸಹವರ್ತಿಗಳೊಂದಿಗೆ ಸೇರಿಕೊಂಡಿದ್ದು, ಇದು ಸಮಗ್ರ ಶಾಂತಿಪಾಲನಾ ಚೌಕಟ್ಟುಗಳನ್ನು ರೂಪಿಸುವಲ್ಲಿ ಭಾರತದ ಪೂರ್ವಭಾವಿ ಪಾತ್ರವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

<><><>

೫೬ನೇ ಸರಕು ಮತ್ತು ಸೇವಾ ತೆರಿಗೆ - ಜಿಎಸ್‌ಟಿ ಸಮಿತಿ ಸಭೆ ಮುಂದಿನ ತಿಂಗಳ ೩ ಮತ್ತು ೪ ರಂದು ನವದೆಹಲಿಯಲ್ಲಿ ನಡೆಯಲಿದೆ. ಈ ಮಹತ್ವದ ಸಭೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಳೆದ ಜಿಎಸ್‌ಟಿ ಸಮಿತಿ ಸಭೆ ೨೦೨೩ರ ಡಿಸೆಂಬರ್ ತಿಂಗಳಲ್ಲಿ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ನಡೆದಿತ್ತು. ಆ ಸಮಯದಲ್ಲಿ ಸಾರವರ್ಧಿತ ಅಕ್ಕಿ ಮೇಲಿನ ಜಿಎಸ್‌ಟಿ ದರವನ್ನು ಶೇಕಡ ೫ ಕ್ಕೆ ಇಳಿಸುವ ನಿರ್ಧಾರ ಸೇರಿದಂತೆ ವಿವಿಧ ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು.

<><><>

ಬೌದ್ಧ ಧಮ್ಮದಲ್ಲಿ ಜ್ಞಾನ ಪ್ರತಿಪಾದನೆಯ ಆಧುನಿಕ ಮಾರ್ಗಗಳ ಕುರಿತು ಚರ್ಚಿಸಲು, ಮೂರನೇ ಅಂತಾರಾಷ್ಟ್ರೀಯ ಯುವ ಬೌದ್ಧ ವಿದ್ವಾಂಸರುಗಳ ಸಮ್ಮೇಳನ ನಿನ್ನೆ ನವದೆಹಲಿಯಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ರಷ್ಯಾ, ವಿಯಟ್ನಾಂ, ಕಾಂಬೋಡಿಯಾ, ಶ್ರೀಲಂಕಾ, ಮ್ಯಾನ್ಮಾರ್, ತೈವಾನ್ ಹಾಗೂ ಭಾರತ ಸೇರಿದಂತೆ ವಿವಿಧ ದೇಶಗಳ ಯುವ ವಿದ್ವಾಂಸರು, ಪ್ರಾಧ್ಯಾಪಕರು, ಮತ್ತು ಗಣ್ಯರು ಪಾಲ್ಗೊಂಡಿದ್ದರು.

<><><>

ಭಾರತದ ಅಭಿವೃದ್ಧಿಯ ಪತದಲ್ಲಿ ತಾಂತ್ರಿಕ ಜವಳಿಯ ಪಾತ್ರ ಮತ್ತು ಕೊಡುಗೆ ಕುರಿತು ಚರ್ಚಿಸಲು ಬಿಹಾರದಲ್ಲಿಂದು ತಾಂತ್ರಿಕ ಜವಳಿ ಮತ್ತು ವಿಕಸಿತ ಭಾರತ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿತ್ತು. ಪಾಟ್ನಾದ ಗ್ಯಾನ ಭವನದಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಕೈಗಾರೀಕೋದ್ಯಮಗಳು ಸರ್ಕಾರಿ ಇಲಾಖೆಗಳು ನವೋದ್ಯಮ ಸಂಶೋಧಕರು ಮತ್ತಿತ್ತರ ಪಾಲುದಾರರು ವಿವಿಧ ವಲಯಗಳಲ್ಲಿ ಸಿಂಥೆಟಿಕ್ ಫೈಬರ್‌ಗಳು ಪಾತ್ರದ ಕುರಿತು ಚರ್ಚಿಸಿದರು.

<><><>

ಉತ್ತರಾಖಂಡದ ಚಮೋಲಿ ಜಿಲ್ಲೆಯ ಥರಾಲಿ ಪ್ರದೇಶದಲ್ಲಿ ನಿನ್ನೆ ರಾತ್ರಿ ಭಾರೀ ಮಳೆಯಿಂದಾಗಿ ಸಂಭವಿಸಿದ ಮೇಘಸ್ಫೋಟದಿಂದ ವ್ಯಾಪಕ ಹಾನಿಯಾಗಿದೆ. ಈ ಹಿನ್ನೆಲೆ, ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ರಕ್ಷಣಾ ಹಾಗೂ ಪರಿಹಾರ ಕಾರ್ಯಾಚರಣೆಗಳನ್ನು ನಿಕಟವಾಗಿ ಗಮನಿಸುತ್ತಿರುವುದಾಗಿ ಹೇಳಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>